# 3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು.

S.C.146/2022

C.W.7
P.W. 7

ದಿನಾಂಕಃ 29-11-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಹೆಸರು | ಃ ರಂಗನಾಥ |
| ತಂದೆಯ ಹೆಸರು | ಃ ಅಜ್ಜೇಗೌಡ |
| ವಯಸ್ಸು | ಃ 58 ವರ್ಷ |
| ಉದ್ಯೋಗ | ಃ ರೆವಿನ್ಯೂ ಇನ್ಸ್‌ಪೆಕ್ಟರ್ |
| ವಾಸ | ಃ ತರೂರು , ಕಳ್ಳಂಬೆಳ್ಳ ಹೋಬಳಿ |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಕಳ್ಳಂಬೆಳ್ಳ ಹೋಬಳಿಯಲ್ಲಿ ರೆವಿನ್ಯೂ ಇನ್ಸ್‌ಪೆಕ್ಟರ್ ಆಗಿ ಕಳೆದ 1 ವರ್ಷದಿಂದ ಕೆಲಸ ಮಾಡುತ್ತಿದ್ದೇನೆ . ಶಿರಾ ತಾಲ್ಲೂಕು ಕಚೇರಿಯಲ್ಲಿ ಪ್ರ ದ ಸ ಆಗಿ ಘಟನೆಯ ಸಮಯದಲ್ಲಿ ಕರ್ತವ್ಯವನ್ನು ಮಾಡುತ್ತಿದ್ದೆ .

2) ನನಗೆ ಶಿರಾ ತಾಲ್ಲೂಕಿನ ತಹಶೀಲ್ದಾರ್ ರವರು ಪಂಚನಾಮೆಗೆ ಹೋಗಿ ತನಿಖಾಧಿಕಾರಿಗಳಿಗೆ ಸಹಕರಿಸುವಂತೆ ಆದೇಶಿಸಿದ ಮೇರೆಗೆ ನಾನು ತನಿಖಾಧಿಕಾರಿಗಳಿಗೆ ಪಂಚನಾಮೆ ಮಾಡುವ ಸಂದರ್ಭಗಳಲ್ಲಿ ಹಾಜರಿದ್ದು ಸಹಕರಿಸಿರುತ್ತೇನೆ. ಸಾಕ್ಷಿಯು ಕೊಲೆ ಮಾಡಿದ ಸ್ಥಳ ಮತ್ತು ಹೆಣವನ್ನು ಹೂತಿಟ್ಟಿರುವ

ಜಾಗವನ್ನು ಗುರುತಿಸಿ ತೋರಿಸಿರುವ ಸ್ಥಳ ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಪಿ-12 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ನಾನು, ಚಾಸಾ-8 , ಪೊಲೀಸರು ಹಾಗೂ ವೈದ್ಯದೀಕಾರಿಗಳು, ತಹಶೀಲ್ದಾರರು ಸದರಿ ಪಂಚನಾಮೆಯ ಸಮಯದಲ್ಲಿ ಹಾಜರಿದ್ದೇವು. ಸದರಿ ಮೃತನ ದೇಹವನ್ನು ಹೂತಿಟ್ಟಿದ್ದ ಜಾಗವು ನ್ಯಾಯಾಲಯದ ಮುಂದೆ ಇರುವ ಆರೋಪಿ ಮತ್ತು ವಿಸಿ ಮೂಲಕ ಹಾಜರುಪಡಿಸಿರುವ 1 ನೇ ಆರೋಪಿಯು ಜಾಗವನ್ನು ತೋರಿಸಿರುತ್ತಾರೆ. ಸದರಿ ಸ್ಥಳವು ಕಮಲನಾಯಕನತಾಂಡ ಆಗಿರುತ್ತದೆ. ಸದರಿ ಸ್ಥಳದಲ್ಲಿ ಮನೆ ಕಟ್ಟಲು ಒಂದು ಪಾಯ ತೆಗೆದಿದ್ದು ಅದನ್ನು ಮಣ್ಣಿನಿಂದ ಮುಚ್ಚಿದ್ದು , ನಂತರ ಜೆ ಸಿ ಬಿ ಯಿಂದ ಮುಚ್ಚಿದ್ದ ಮಣ್ಣನ್ನು ತೆಗೆದು ಒಂದು ಗಂಡಸಿನ ಶವವನ್ನು ಹೊರತೆಗೆಯಲಾಗಿರುತ್ತದೆ. ಸದರಿ ಮೃತನ ಹೆಸರು ರವಿಚಂದ್ರನಾಯಕ ಎಂದು ಗೊತ್ತಾಯಿತು. ಸದರಿ ಪಂಚನಾಮೆಯನ್ನು ದಿ 03-06-22 ರಂದು ಮಧ್ಯಾಹ್ನ 12.10 ರಿಂದ 1 ಗಂಟೆ ಮಾಡಲಾಗಿರುತ್ತದೆ.

3 ) ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿ ಅದರ ಮೇಲೆ ಇರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದು ಸ್ಥಳಪಂಚನಾಮೆಯಾಗಿದ್ದು ಈಗಾಗಲೇ ನಿಪಿ-13 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-13(ಎ ) ಎಂದು ಗುರುತಿಸಲಾಯಿತು. ಸದರಿ

ಪಂಚನಾಮೆಯನ್ನು ಸಹ ದಿ 03-06-22 ರಂದು ಸಂಜೆಯ ಸಮಯದಲ್ಲಿ ಮಾಡಲಾಗಿರುತ್ತದೆ . ನನ್ನ ಸಮಕ್ಷಮ ಪಾಯದಿಂದ ಹೊರಗೆ ತೆಗೆಯಲಾದ ಶವವು ಸಂಪೂರ್ಣ ಕೊಳೆತು ಹೋಗಿ ದುರ್ವಸಾನೆಯಿಂದ ಕೂಡಿತ್ತು, ಸದರಿ ಶವಕ್ಕೆ ಬೆಡ್ ಶೀಟ್ ಸುತ್ತಲಾಗಿತ್ತು.

( ನ್ಯಾಯಾಲಯದ ಅನುಮತಿಯ ಮೇರೆಗೆ ಬಿಳಿ ಬಟ್ಟೆಯಲ್ಲಿ ಸೀಲ್ ಆಗಿದ್ದ 3 ವಸ್ತುಗಳನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. )

ನ್ಯಾಯಾಲಯದ ಮುಂದೆ ಇರುವ ವಸ್ತುಗಳನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು , ಸದರಿ ವಸ್ತುಗಳು ಮೃತ ವ್ಯಕ್ತಿಯ ಮೈಯ ಮೇಲೆ ಇದ್ದ ವಸ್ತುಗಳು ಎಂದು ಗುರುತಿಸಿರುತ್ತಾರೆ. ಕಪ್ಪು ಬಣ್ಣದ ಪ್ಯಾಂಟ್ ನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಅದನ್ನು ಮು ಮಾ-1 ಎಂದು, ಕೆಂಪು ಮತ್ತು ಬಿಳಿ ಬಣ್ಣದ ತುಂಬು ತೋಳಿನ ಶರಟ್ ನ್ನು ಮು ಮಾ-2 ಎಂದು, ಕಾಪಿ ಕಲರ್ ಒಂದು ಕಾಚಾವನ್ನು ಮು ಮಾ-3 ಎಂದು, ಕೆಂಪು ಬಣ್ಣದ ದಾರದ ಉಡುದಾರವನ್ನು ಎಂಓ-4 ಎಂದು, ಮೃತನ ದೇಹದ ಕುತ್ತಿಗೆಯಲ್ಲಿ ಇದ್ದ ದಾರ ವನ್ನು ಮು ಮಾ-5 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಮೃತ ವ್ಯಕ್ತಿಯ ದೇಹಕ್ಕೆ ಸುತ್ತಿದ ಬೆಡ್ ಶೀಟ್ ನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಅದನ್ನು ಎಂಓ-6 ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯ ಸಮಯದಲ್ಲಿ ನ್ಯಾಯಾಲಯದ ಮುಂದೆ ಇರುವ ಬಟ್ಟೆಗಳು ಹಾಗೂ ದಾರಗಳನ್ನು ಜಪ್ತುಪಡಿಸಿಕೊಂಡರು.

4) ಸಾಕ್ಷಿಗೆ ಮತ್ತೊಂದು ಪಂಚನಾಮೆ ದಾಖಲೆಯನ್ನು ತೋರಿಸಲಾಗಿ ಅದರ ಮೇಲೆ ಇರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದು ಅದನ್ನು ನಿಪಿ-14 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ಮೃತ ದೇಹದ ಶವದ ಮೇಲೆ ಇದ್ದ ಬಟ್ಟೆಗಳನ್ನು ತನಿಖಾಧಿಕಾರಿಗಳು ಬಿಳಿ ಬಟ್ಟೆಯಿಂದ ಸುತ್ತಿ ಪ್ಯಾಕ್ ಮಾಡಿಕೊಂಡಿರುತ್ತಾರೆ. ಶವತನಿಖಾ ವರದಿಯ ಮೇಲೆ ಇರುವ ಸಾಕ್ಷಿದಾರರ ಸಹಿಯನ್ನು ನೋಡಿ ಗುರುತಿಸಿದ್ದು ಶವತನಿಖಾ ವರದಿಯನ್ನು ಈಗಾಗಲೇ ನಿಪಿ-11 ಎಂದು ಗುರುತಿಸಲಾಗಿದ್ದು, ಅದರಲ್ಲಿ ಇರುವ ಸಾಕ್ಷಿದಾರರ ಸಹಿಯನ್ನು ನಿಪಿ-11(ಬಿ) ಎಂದುಗುರುತಿಸಲಾಯಿತು. ಸದರಿ ಸಹಿಯನ್ನು ಅದೇ ಸ್ಥಳದಲ್ಲಿ ಮಾಡಲಾಗಿರುತ್ತದೆ.

( ಈ ಸಾಕ್ಷಿಯು ಈಃ ಹಿಂದೆ ತನಿಖಾಧಿಕಾರಿಯವರು ಮಾಡಿದ ಪಂಚನಾಮೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ವಿಶೇಷ ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರ ಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು.)

<u>ಪಾಟೀ ಸವಾಲು ಮಾನ್ಯ ಪಿ.ಪಿ. ರವರಿಂದಃ-</u>

5) ದಿ 03-06-22 ರಂದು ಬೆಳಗ್ಗೆ 11 ರಿಂದ 12 ಗಂಟೆ ಸಮಯದಲ್ಲಿ ಆರೋಪಿಗಳು ತೋರಿಸಿದ ರವಿಚಂದ್ರನಾಯಕರವರು ಅಜ್ಜಿ ಮಂಗಳಬಾಯಿ ಇವರ ಹೆಸರಿನಲ್ಲಿ ಇರುವ ವಾಸದ ಮನೆಯಿಂದ ಸುಮಾರು 30 ಮೀಟರ್ ದೂರದಲ್ಲಿ ಒಂದು ಮನೆಯ ಪಾಯದ ಮೇಲೆ ಹಾಕಿದ್ದ ಗುಡಿಸಲು ಶೆಡ್ ಬಳಿಕರೆದುಕೊಂಡು ಹೋಗಿದ್ದು, ಇದೇ ಸ್ಥಳದಲ್ಲಿ ರವಿಚಂದ್ರ ನಾಯಕ ಇವರ ಶವವನ್ನು ಹೂತಿಟ್ಟಿದ್ದು ಎಂದು ತೋರಿಸಿದ ಸ್ಥಳವನ್ನು ತನಿಖಾಧಿಕಾರಿಗಳು ಪರಿಶೀಲಿಸಿ ಪಾಯದ ಮೇಲೆ ಸುಮಾರು 5 ಅಡಿ ಮಣ್ಣು ಹಾಕಿದ್ದು ಇತ್ತು ಅಂದರೆ ಸರಿ . ಸದರಿ ಮಣ್ಣನ್ನು ಈ ಕೇಸಿನ 1 ನೇ ಆರೋಪಿಯು ತಾವು ಈ ಜಾಗದಲ್ಲಿ ಶವವನ್ನು ಹೂತಿಟ್ಟಿದ್ದು ಅನಂತರ ಮಣ್ಣನ್ನು ಹೊಡೆಸಿರುತ್ತೇವೆಂದು ತಿಳಿಸಿದಾಗ, ಅದನ್ನು ಹೊರತೆಗೆಯಲು ತಹಶೀಲ್ದಾರ್ ರವರ ಆದೇಶದ ಪ್ರಕಾರ ನಂತರದಲ್ಲಿ ಹೊರತೆಗೆಯಲಾಗಿತ್ತು ಅಂದರೆ ಸರಿ . ಅದೇ ದಿನಾಂಕದಂದು ತುಮಕೂರು ಜಿಲ್ಲಾ ಆಸ್ಪತ್ರೆಯ ಫೊರೆನ್ಸಿಕ್ ವೈದ್ಯರಾದ ಗುನ್ನಯ್ಯ ಇವರಿಂದ ಶವಪರೀಕ್ಷೆಯನ್ನು ಮಾಡಿಸಿರುತ್ತದೆ ಅಂದರೆ ಸರಿ . ನಂತರ ವೈದ್ಯರ ಪರಿಶೀಲನೆಗಾಗಿ ಶವದ ಮೇಲೆ ಇರುವ ನ್ಯಾಯಾಲಯದ ಮುಂದೆ ಇರುವ ಬಟ್ಟೆಗಳನ್ನು ಶವದಿಂದ ತೆಗೆದಿರುತ್ತದೆ ಅಂದರೆ ಸರಿ. ಶವಪರೀಕ್ಷೆ ನಡೆಯುವ ಸಮಯದಲ್ಲಿ ನಾನು ಹಾಜರಿದ್ದೆ ಅಂದರೆ ಸರಿ. ಅದೇ ದಿನಾಂಕ ಶವತನಿಖೆಯನ್ನು ಮಧ್ಯಾಹ್ನ 1 ರಿಂದ 3 ಗಂಟೆಯವರಿಗೆ ಜರುಗಿಸಿದ್ದು ವೈದ್ಯರು ಶವದ ಮೈಯ ಮೇಲೆ ಇರುವ ಗಾಯಗಳು ಮೃತನ ದೇಹದ ಎತ್ತರ ಮತ್ತು ಸಾವು ಸಂಬಂವಿಸಲು ಕಾರಣಗಳನ್ನು ಶವತನಿಖಾ ವರದಿಯಲ್ಲಿ ನಮ್ಮ ಸಮಕ್ಷಮ ನಮೂದಿಸಿ ಬರೆದುಕೊಂಡಿರುತ್ತಾರೆ ಅಂದರೆ ಸರಿ .

<u>ಪಾಟೀ ಸವಾಲುಃ  ಆರೋಪಿಯ  ಪರ  ಶ್ರೀ ಸಿಡಿಸಿ  ವಕೀಲರಿಂದಃ</u>

ಮಹಜರ್ ನ್ನು ಪೊಲೀಸರು ಬರೆದರು. ಮಹಜರ್ ಸಮಯದಲ್ಲಿ ನನ್ನ ಜೊತೆ ತಹಶೀಲ್ದಾರ್ , ಪೂಲೀಸರು , ರೈತರು ಮತ್ತು ಊರಿನ ಜನರು ಸೇರಿದ್ದರು. ಈ ಪ್ರಕರಣದ ಪಿರ್ಯಾದಿದಾರರು ಯಾರು ಎಂದು ನನಗೆ ಗೊತ್ತಿಲ್ಲ. ಪಿರ್ಯಾದಿದಾರರು ಹಾಜರಿದ್ದು ಅವನೇ ಸ್ಥಳವನ್ನು ತೋರಿಸಿದ ಅಂದರೆ ಸರಿಯಲ್ಲ. ಸಾಕ್ಷಿ 1 ಮತ್ತು 2 ನೇ ಆರೋಪಿಯು ಸ್ಥಳ ತೋರಿಸಿದರು ಎಂದು ನುಡಿಯುತ್ತಾರೆ. ಆರೋಪಿತರು ಸ್ಥಳ ತೋರಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ . ಪಾಯದ ಮೇಲೆ ಮಣ್ಣು ಇತ್ತು, ಮಣ್ಣನ್ನು ಹೊರತುಪಡಿಸಿ ಬೇರೆ ಏನೂ ಇರಲಿಲ್ಲ. ಸಾಕ್ಷಿ ಮುಂದುವರೆದು ಪಾಯದ ಮೇಲೆ ಗುಡ್ಲು ಇತ್ತು ಎಂದು ನುಡಿಯುತ್ತಾರೆ. ಪಾಯದ ಮೇಲೆ ಮಣ್ಣು ಇದಿದ್ದರಿಂದ ಎಷ್ಟು ಅಡಿಯ ಪಾಯ ಎಂದು ಗಮನಿಸಲಿಲ್ಲ.  ಪಾಯದ ಮೇಲೆ ಇದ್ದ ಮಣ್ಣನ್ನು ಪೂರ್ಣವಾಗಿ ತೆಗೆದು ನಂತರ ಸುಮಾರು 5 ರಿಂದ 6 ಅಡಿ ಆಳ ತೆಗೆದಾಗ ಹೆಣ ಕಂಡು ಬಂದಿತು. ಪಾಯದ ಮೇಲಿಂದ ಯಾವುದೇ ಮಣ್ಣು ಮತ್ತು ಹೆಣ ತೆಗೆದಿಲ್ಲ ಅಂದರೆ ಸರಿಯಲ್ಲ. ನಿಪಿ13 ನ್ನು ಪೊಲೀಸರೇ ಬರೆದುಕೊಂಡಿರುತ್ತಾರೆ. ನನ್ನ ಸಮಕ್ಷಮ ಮು ಮಾ-1 ರಿಂದ 6 ನ್ನು ಅಮಾನತ್ತುಪಡಿಸಿಕೊಂಡಿಲ್ಲ, ಈ ಬಗ್ಗೆ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.  ನಿಪಿ-11,14 ನ್ನು  ಸ್ಥಳದಲ್ಲಿ ಇದ್ದ ಪೊಲೀಸರೇ ಬರೆದುಕೊಂಡರು.  ನಿಪಿ-11 ರಿಂದ 14 ಗಳನ್ನು ಮೇಲೆ ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿದ ಅಂಶಗಳನ್ನು ಬರೆದಿರುತ್ತಾರೆ.  1 ನೇ

ಆರೋಪಿಯು ಪಾಯದ ಮೇಲೆ ಇದ್ದ ಮಣ್ಣನ್ನು ನಾನೇ ಹಾಕಿರುತ್ತೇನೆಂದು ಹೇಳಿದನು ಎಂದುಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಎದುರಿಗೆ ಯಾವುದೇ ಮಹಜರ್ ಮಾಡಿಲ್ಲ ಮತ್ತು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ. ತನಿಖಾಧಿಗಳಿಗೆ ಸಹಾಯವಾಗಲೆಯೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

<u>ಪಾಟೀ ಸವಾಲು 2 ನೇ ಆರೋಪಿ ಪರ ಶ್ರೀ ಎಂ ಎಸ್ ಯು ವಕೀಲರಿಂದಃ-</u>

ನಮ್ಮ ತಹಶೀಲ್ದಾರ್ ರವರ ಮೌಖಿಕ ಆದೇಶದ ಮೇರೆಗೆ ನಾನು ಪಂಚನಾಮೆಗೆ ಪಂಚರಾಗಿ ಭಾಗವಹಿಸಿರುತ್ತೇನೆ. ನಾನು ಘಟನಾ ಸ್ಥಳಕ್ಕ ಹೋಗುವ ಪೂರ್ವದಲ್ಲಿ ಹೆಣವನ್ನು ತೆಗೆದಿದ್ದರು ಅಂದರೆ ಸರಿಯಲ್ಲ. ಯಾವುದೇ ಮಹಜರ್ ಮಾಡಿಲ್ಲ ಅಂದರೆ ಸರಿಯಲ್ಲ .

- ಮರುವಿಚಾರಣೆ ಇಲ್ಲ-

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇ ಸ ಇದೆ ಎಂದು ಒಪ್ಪಿದ್ದಾರೆ.

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು

ವಿಶೇಷ ಸರ್ಕಾರಿ ಅಭಿಯೋಜಕರವರು ಮರುವಿಚಾರಣೆ ನಡೆಸಲು ನ್ಯಾಯಾಲಯದ ಅನುಮತಿಯನ್ನು ಕೋರಿದ್ದು , ಅನುಮತಿಸಲಾಗಿದೆ.

ಮರುವಿಚಾರಣೆ ಮಾನ್ಯಪಿಪಿ ರವರಿಂದಃ-

ಸಾಕ್ಷಿಗೆ ಪಂಚನಾಮೆಯ ಕಾಲದಲ್ಲಿ ತೆಗೆದ 8 ಪೋಟೋಗಳನ್ನು ತೋರಿಸಿದ್ದು ಅವುಗಳನ್ನು ನೋಡಿ ಗುರುತಿಸಿದ್ದು , ಅವುಗಳನ್ನು ಕ್ರಮವಾಗಿ ನಿ ಪಿ -15 ರಿಂದ ನಿಪಿ-22 ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-21 ರ ಪೋಟೋದಲ್ಲಿ ಸಾಕ್ಷಿ ತನ್ನ ಭಾವಚಿತ್ರವನ್ನು ನೋಡಿ ಗುರುತಿಸಿರುತ್ತಾರೆ.

ಮರುಪಾಟೀ ಸವಾಲು **1** ನೇ ಆರೋಪಿಯ ಪರ ಸಿಡಿಸಿ ವಕೀಲರಿಂದಃ-

ನಿಪಿ-15 ರಿಂದ 22 ರ ಪೋಟೋಗಳಲ್ಲಿ ಪಾಯ ಕಂಡು ಬರುವುದಿಲ್ಲ ಅಂದರೆ ಸರಿ .

2 ನೇ ಆರೋಪಿ ಪರ ವಕೀಲರು 1 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಆಳವಡಿಸಿಕೊಳ್ಳಲು ಕೋರಿರುತ್ತಾರೆ.

- ಮರುವಿಚಾರಣೆ ಇಲ್ಲ-

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇ ಸ ಇದೆ ಎಂದು ಒಪ್ಪಿದ್ದಾರೆ.

**3** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು